<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

**S.C. No. 218/2025**

| | | | |
|---|---|---|---|
| ಸಾಕ್ಷಿಯ ಹೆಸರು | ಶ್ರೀ. ಧನುಷ್ | ಚಾಸಾಃ | ಪ್ರಾಸಾಃ |
| ತಂದೆಯ ಹೆಸರು | ರಾಮನಾಯಕ್ | 4 | 4 |
| ವಯಸ್ಸು | 23 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **02.06.2026.** | |
| ಉದ್ಯೋಗ | ಚಾಲಕ | | |
| ವಾಸ ಸ್ಥಳ | ಹಿರಿಯೂರು | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಚಾಸಾ. 1 / ಶಾಂತಕುಮಾರ್ ರವರ ಪರಿಚಯ ಇದೆ. ಆರೋಪಿ ಗೊತ್ತು. ಈಗ್ಗೆ 1 ವರ್ಷದ ಹಿಂದೆ ರಾತ್ರಿ 9.00 ಗಂಟೆಗೆ ಚಾಸಾ. 1 ರವರು ನಾಗರಾಜು ರವರನ್ನು ಕರೆದುಕೊಂಡು ಹೋಗುತ್ತಿದ್ದಾಗ ಆರೋಪಿ ಕಿರಣ್ ಜೊತೆಗೆ ಜಗಳ ಮಾಡುತ್ತಿದ್ದರು. ನಾಗರಾಜು ಹೋಗುವಾಗ ಜಾರಿ ಬಿದ್ದು ಕೈ ಮುರಿಯಿತು. ಆರೋಪಿ ಚಾಸಾ. 1 ರವರಿಗೆ ದೊಣ್ಣೆಯಿಂದ ಹೊಡೆದಿಲ್ಲ ಮತ್ತು ಅವಾಚ್ಯ ಶಬ್ದಗಳಿಂದ ಬೈದಿಲ್ಲ. ಪೋಲೀಸರು ನನ್ನ ಹೇಳಿಕೆ ಮಾಡಿಕೊಂಡಿಲ್ಲ. ನಾನು ಪೊಲೀಸರ ಮುಂದೆ ಆರೋಪಿ ಜಗಳ ಮಾಡಿ ನಾಗರಾಜು ಹೊಡೆದಿದ್ದಾರೆ ಎಂದು ಹೇಳಿಲ್ಲ.

(ಈ ಸಾಕ್ಷಿಯನ್ನು ಅಭಿಯೋಜಕರು ಪ್ರತಿ ಕೂಲ ಸಾಕ್ಷಿ ಅಂತ ಪರಿಗಣಿಸಲು ಅನುಮತಿ ಕೇಳಿದ್ದು ಸಾಕ್ಷಿಯು ನೀಡಿದ್ದ ವ್ಯತಿರಿಕ್ತ ಹೇಳಿಕೆಯನ್ನು ಗಣನೆಗೆ ತೆಗೆದುಕೊಂಡು ಅನುಮತಿ ನೀಡಲಾಗಿದೆ)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

ದಿನಾಂಕ 23.02.2025 ರಂದು ರಾತ್ರಿ ಸುಮಾರು 12:15 ಗಂಟೆ ಸಮಯದಲ್ಲಿ ನಾನು, ರಾಕೇಶ್ @ ಕಿರಣ್, ರವಿ ಕಿರಣ್ ರವರುಗಳು ನಾಗೇಶ್ ರವರ ಮನೆಯ ಮುಂಭಾಗದಲ್ಲಿ ಜೋರಾಗಿ ಮಾತನಾಡಿಕೊಂಡು ನಿಂತಿದ್ದಾಗ, ಚಾಸಾ. 1 ಮತ್ತು ಅವರ ತಂದೆ ಮನೆಯಿಂದ ಆಚೆ ಬಂದು ಆರೋಪಿಯನ್ನು ನೋಡುತ್ತಾ ನಿಂತಿದ್ದಾಗ ಆರೋಪಿ ತನ್ನ ಮನೆಯ ಒಳಗೆ ಹೋಗಿ ದೊಣ್ಣೆಯನ್ನು

ತಂದು ಚಾಸಾ. 1 ರವರನ್ನು ಕೆಟ್ಟಾ ಮಾತುಗಳಿಂದ ಬೈಯುತ್ತಾ ಕೊಲೆ ಮಾಡುತ್ತೇನೆ ಎಂದು ಕೊಲೆ ಮಾಡಲು ಹೋದಾಗ ಕೈಗಳು ಅಡ್ಡ ಇಟ್ಟಿದ್ದಾಗ ತಲೆಗೆ ಬಿಳಬೇಕಾದ ಏಟಿನಿಂದ ಕೈಗೆ ಹೊಡೆದು ಮೂಳೆ ಮುರಿದಿತ್ತು ಎಂದರೆ ಸರಿ ಅಲ್ಲ. ನಂತರ ವಿಚಾರ ಮಾಡಿದಾಗ ಚಾಸಾ. 1 ರವರ ಬಳಿ ಆರೋಪಿ 3 ತಿಂಗಳ ಹಿಂದೆ 10 ಸಾವಿರ ಸಾಲ ಪಡೆದು ವಾಪಸ್ಸು ಕೊಡದೇ ಈ ವಿಚಾರದಲ್ಲಿ ಗಲಾಟೆಯಾಯಿತು ಎಂದರೆ ಸರಿ ಅಲ್ಲ. ಸಾಕ್ಷಿ ಹೇಳಿಕೆಯ ಭಾಗವನ್ನು ಓದಿ ತೋರಿಸಿದಾಗ ಸಾಕ್ಷಿ ನಿರಾಕರಿಸಿದ್ದರಿಂದ ಸದರಿ ಹೇಳಿಕೆಯ ಭಾಗವನ್ನು ನಿಶಾನೆ.ಪಿ. 7 ಎಂದು ಗುರುತಿಸಲಾಯಿತು. ಆರೋಪಿ ಜೊತೆಗೆ ರಾಜೀ ಮಾಡಿಕೊಂಡು ಈಗ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಪಾಟೀ ಸವಾಲುಃ ಆರೋಪಿತರ ಪರ : ಇಲ್ಲ ಎಂದು ಹೇಳಿರುತ್ತಾರೆ.

<u>ಮರು ವಿಚಾರಣೆ ಇಲ್ಲ</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

(ಶ್ರೀಮತಿ. ಬಿ.ಎಸ್.ರೇಖಾ )
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.